ಸ್ಮಶಾನ ಒತ್ತುವರಿ ಜಾಗ ತೆರವುಗೊಳಿಸುವುದು

775(1097) ಶ್ರೀ ರಾಜು ಕೆ. (ರಾಮನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಚನ್ನಪಟ್ಟಣ ಕ್ಷೇತ್ರದ ಬೇವೂರು ಮಂಡ್ಯ ಗ್ರಾಮದಲ್ಲಿರುವ ಹಿಂದೂ ಸ್ಮಶಾನವನ್ನು ಒತ್ತುವರಿ ಮಾಡಿರುವುದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸ್ಮಶಾನ ಜಾಗದ ಒತ್ತುವರಿಯನ್ನು ತೆರವುಗೊಳಿಸದಿರಲು ಕಾರಣವೇನು (ವಿವರ ನೀಡುವುದು) ;

ಇ) ಹಾಗಿದ್ದಲ್ಲಿ, ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ (ಮಾಹಿತಿ ನೀಡುವುದು) ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬೇವೂರು ಮಂಡ್ಯ ಗ್ರಾಮವು ಎಂ.ಬಿ.ಹಳ್ಳಿ ಗ್ರಾಮದ ಮಜರೆ ಗ್ರಾಮವಾಗಿರುತ್ತದೆ. ಬೇವೂರು ಮಂಡ್ಯ ಗ್ರಾಮದ ಪಕ್ಕದಲ್ಲಿ ಎಂ.ಬಿ.ಹಳ್ಳಿ ಗ್ರಾಮದ ಸ.ನಂ. 51ರಲ್ಲಿ ವಿಸ್ತೀರ್ಣ 0.19 ಗುಂಟೆ ಮತ್ತು ಸ.ನಂ.230ರಲ್ಲಿ 0.35 ಗುಂಟೆ ಸ್ಮಶಾನವಿದ್ದು, ಅದನ್ನು ಅಳತೆ ಮಾಡಿಸಿ ದಿನಾಂಕ : 29.06.2010 ರಂದು ಖುಲ್ಲಾ ಪಡಿಸಲಾಗಿದೆ. ಮತ್ತೊಮ್ಮೆ ದಿನಾಂಕ : 25.01.2011ರಂದು ಪರಿಶೀಲಿಸಲಾಗಿ ಸದರಿ ಜಮೀನು ಖುಲ್ಲಾ ಇರುತ್ತದೆ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಹಂಪಿ ಉತ್ಸವ

777(120) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಜನವರಿ 2011ರಲ್ಲಿ ಹಂಪಿ ಉತ್ಸವವನ್ನು ಏರ್ಪಡಿಸಲಾಗಿತ್ತೇ ;

ಆ) ಇದಕ್ಕಾಗಿ ಸರ್ಕಾರ ಖರ್ಚು ಮಾಡಿದ ಹಣವೆಷ್ಟು ;

ಇ) ಈ ಹಂಪಿ ಉತ್ಸವಕ್ಕೆ ವಿರೋಧ ಪಕ್ಷದವರನ್ನು ಆಹ್ವಾನಿಸಲಾಗಿತ್ತೇ ;

ಈ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ;

ಉ) ಈ ಲೋಪಕ್ಕೆ ಕಾರಣಕರ್ತರಾದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) ಏರ್ಪಡಿಸಲಾಗಿತ್ತು.

ಆ) ರೂ. 10.00 ಕೋಟಿ

ಇ) ಆಹ್ವಾನಿಸಲಾಗಿತ್ತು.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಸಣ್ಣ ಕೈಗಾರಿಕೆಗಳಿಗೆ ವೃತ್ತಿ ತೆರಿಗೆ

778(121) ಶ್ರೀ ರಾಮಲಿಂಗರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು ;

ಆ) ಈ ಕೈಗಾರಿಕೆಗಳಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಗಳೇನು ;

ಇ) ಈ ಸಣ್ಣ ಕೈಗಾರಿಕೆಗಳಿಂದ ಪ್ರತಿ ವರ್ಷ ವೃತ್ತಿ ತೆರಿಗೆ ಮೂಲಕ ಬರುತ್ತಿರುವ ವರಮಾನವೆಷ್ಟು ;

ಈ) ಈ ಸಣ್ಣ ಕೈಗಾರಿಕೆಗಳಿಗೆ ವೃತ್ತಿ ತೆರಿಗೆಯನ್ನು ರದ್ದುಗೊಳಿಸಬೇಕೆಂಬ ಮನವಿ ಸರ್ಕಾರಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು) :

ಅ) ರಾಜ್ಯದಲ್ಲಿ ದಿನಾಂಕ : 31-1-2011 ರವರೆಗೆ 4,08,807 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ನೋಂದಣಿಗೊಂಡಿರುತ್ತವೆ.